KAVP210003372016

Presented on : 14-11-2016
Registered on : 14-11-2016
Decided on : 15-07-2026

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಬಸವನ ಬಾಗೇವಾಡಿ .**

**-:ಉಪಸ್ಥಿತರು:-**

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಬಸವನ ಬಾಗೇವಾಡಿ

**ಸಿ.ಸಿ. ನಂ.1417/2016**

ದಿನಾಂಕಃ **15** ಜುಲೈ **2026**

ಫಿರ್ಯಾದಿಃ ರಾಜ್ಯದ ಪರವಾಗಿ **ಪೊಲೀಸ್ ಇನ್ಸ್‌ಪೆಕ್ಟರ್, ಕೋಲಾರ ಪೊಲೀಸ್ ಠಾಣೆ.**

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ಧ-

ಆರೋಪಿ-

1) ಪರಪ್ಪ ತಂದೆ ನಿಂಗಪ್ಪ ಗುಂಡಣ್ಣವರ,

ವಯಾಃ 36 ವರ್ಷ, ಉಃ ಬಸ್ ಚಾಲಕ

ಸಾಃ ಹುವಿನ ಹಿಪ್ಪರಗಿ,ತಾಃ ಬಸವನ ಬಾಗೇವಾಡಿ

( ಆರೋಪಿಯನ್ನು ಪ್ರತಿನಿಧಿಸುವವರುಃ ಶ್ರೀ ಜಿ.ಬಿ.ಬಿ, ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 18.07.2016 |
| 2 | ಅಪರಾಧ ವರದಿಯಾದ ದಿನಾಂಕ | 18.07.2016 |
| 3 | ಆರೋಪಿಯನ್ನು ಬಂಧಿಸಿದ ದಿನಾಂಕ | 23.07.2016 |
| 4 | ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿದ ದಿನಾಂಕ | 23.07.2016 |
| 5 | ಫಿರ್ಯಾದಿಯ ಹೆಸರು | ಪರಶುರಾಮ ತದೆ ಮಹಾಗೊಂಡಪ್ಪ ಹಡಪದ |
| 6 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 05.02.2018 |
| 7 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 22.06.2024 |
| 8 | ಆರೋಪಿಸಲಾದ ಅಪರಾಧಗಳು | ಭಾ.ದಂ.ಸಂ.ಕಲಂ.279 ಹಾಗೂ 304(A) ರ ಅಡಿಯಲ್ಲಿ |
| 9 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿ ನಿರಪರಾಧಿ |

**-: ತೀರ್ಪು :-**

ವೃತ ನಿರೀಕ್ಷಕರು ಬಸವನ ಬಾಗೇವಾಡಿರವರು ಆರೋಪಿಯ ವಿರುದ್ಧ ದೋಷಾರೋಪಣೆ ಪತ್ರವನ್ನು ಸಲ್ಲಿಸಿ, ಆರೋಪಿಯು ಭಾ.ದಂ.ಸಂ. ಕಲಂ. **279** ಹಾಗೂ **304(**ಎ**)** ರ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

**2.** ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-

ದಿನಾಂಕಃ 18-07-2016 ರಂದು ಸಂಜೆ 19-45 ಗಂಟೆ ಸುಮಾರಿಗೆ ಕೋಲ್ಹಾರ ಪೋಲಿಸ್ ಠಾಣಾ ಹದ್ದಿ ಪೈಕಿ ವಿಜಯಪೂರ -ಬಾಗಲಕೋಟ ಎಚ್.ಎಚ್-218 ಡಾಂಬರ ರಸ್ತೆಯ ಮೇಲೆ ಕೋಲ್ಹಾರದ ಚನ್ನಮಲ್ಲಪ್ಪ ಗಿಡ್ಡಪ್ಪಗೋಳರವರ ಖಡಿ ಮಶೀನದ ಮುಂದೆ ರಸ್ತೆಯ ಮೇಲೆ ಆರೋಪಿಯು ಬಸ್ಸ ನಂಃಕೆ.ಎ-28/ಎಫ್-2034 ನೇದ್ದನ್ನು ಬಾಗಲಕೋಟ ಕಡೆಯಿಂದ ವಿಜಯಪೂರ ಕಡೆಗೆ ಅತಿ ಜೋರಾಗಿ ಹಾಗೂ ನಿರ್ಲಕ್ಷ್ಯತನದಿಂದ ಮಾನವೀಯ

ಜೀವಕ್ಕೆ ಅಪಾಯಕರವಾಗುವ ರೀತಿಯಲ್ಲಿ ನಡೆಯಿಸಿಕೊಂಡು ತನ್ನ ಎದುರಿಗೆ ತನ್ನ ಸೈಡಿನಲ್ಲಿ ಸುರೇಶ ತಂದೆ ಸಿದ್ದಪ್ಪ ಹಡಪದರವರು ಚಾಲನೆ ಮಾಡುತ್ತಿದ್ದ ಮೋಟಾರ ಸೈಕಲ್ ನಂ: ಕೆಎ-28/ಇ.ಕೆ-0507 ನೇದ್ದಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದು, ಸದರಿ ಅಪಘಾತದಲ್ಲಿ ಆತನ ತಲೆ , ಮೈ ಕೈಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿ ಮರಣ ಹೊಂದಿರುತ್ತಾರೆ. ಆದಕಾರಣ ಆರೋಪಿಯು ಮೇಲ್ಕಾಣಿಸಿದ ಅಪರಾಧಗಳನ್ನು ಮಾಡಿರುತ್ತಾರೆಂದು ಆರೋಪಿಸಲಾಗಿದೆ.

3. ಕೋಲ್ಹಾರ ಪೋಲೀಸರು ಆರೋಪಿಯನ್ನು ದಿನಾಂಕ:23-07-2016 ರಂದು ಬಂಧಿಸಿ, ಜಾಮೀನ ಮೇಲೆ ಬಿಡುಗಡೆಗೊಳಿಸಿರುತ್ತಾರೆ. ಆರೋಪಿಯ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ ನಂತರ, ಆರೋಪಣ ಸಂಜ್ಞೆಯವನ್ನು ತೆಗೆದುಕೊಳ್ಳಲಾಯಿತು. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ. 207 ರ ಅಡಿಯಲ್ಲಿ ದೋಷಾರೋಪಣ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿಯ ವಿರುದ್ಧ ಆಪಾದನೆಯನ್ನು ರಚಿಸಿ ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿಯು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

4. ಆರೋಪಿಯ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣ ಪತ್ರದಲ್ಲಿ ಒಟ್ಟು 18 ಜನ ಸಾಕ್ಷಿದಾರರನ್ನು ತೋರಿಸಲಾಗಿದ್ದು, ಅವರಲ್ಲಿ ಪ್ರಾ.ಸಾ.1 ರಿಂದ 6 ಎಂದು ವಿಚಾರಣೆ ಮಾಡಿ ನಿ.ಪಿ.1 ರಿಂದ 10 ರವರೆಗೆ ದಾಖಲಾತಿಗಳನ್ನು ನಿಶಾನಿಸಿಕೊಂಡಿರುತ್ತಾರೆ.

5. ಈ ಪ್ರಕರಣದ ವಿಚಾರಣೆ ಮುಗಿದ ನಂತರ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಅವರ ವಿರುದ್ಧದ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸಲಾಗಿ, ಆರೋಪಿಯು ಅಭಿಯೋಜನೆ ಸಾಕ್ಷ್ಯವನ್ನು ಸಂಪೂರ್ಣವಾಗಿ

ಅಲ್ಲಗಳೆದಿದ್ದು ತನ್ನ ಪರವಾಗಿ ಯಾವುದೇ ರಕ್ಷಣಾತ್ಮಕ ಸಾಕ್ಷಿಗಳನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಹಾಜರುಪಡಿಸಿರುವುದಿಲ್ಲ.

6. ಉಭಯ ಪಕ್ಷಗಾರರ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು.

7. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ:-

<u>ಅಂ ಶ ಗ ಳು</u>

(1) ದಿನಾಂಕಃ18-07-2016 ರಂದು ಸಂಜೆ 19-45 ಗಂಟೆ ಸುಮಾರಿಗೆ ಕೋಲ್ಹಾರ ಪೋಲಿಸ್ ಠಾಣಾ ಹದ್ದಿ ಪೈಕಿ ವಿಜಯಪೂರ - ಬಾಗಲಕೋಟ ಎಚ್.ಎಚ್-218 ಡಾಂಬರ ರಸ್ತೆಯ ಮೇಲೆ ಕೋಲ್ಹಾರದ ಚನ್ನಮಲ್ಲಪ್ಪ ಗಿಡ್ಡಪ್ಪಗೋಳರವರ ಖಡಿ ಮಶೀನದ ಮುಂದೆ ರಸ್ತೆಯ ಮೇಲೆ ಆರೋಪಿಯು ಬಸ್ಸ ನಂಃಕೆ.ಎ-28/ಎಫ್-2034 ನೇದ್ದನ್ನು ಬಾಗಲಕೋಟ ಕಡೆಯಿಂದ ವಿಜಯಪೂರ ಕಡೆಗೆ ಅತಿ ಜೋರಾಗಿ ಮಾನವೀಯ ಜೀವಕ್ಕೆ ಅಪಾಯಕರವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಹೋಗಿರುತ್ತಾರೆ. ಈ ಮೂಲಕ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ.279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ?

2 ಅದೇ ರೀತಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಬಸ್ಸ ನಂಃ ಕೆ.ಎ-28/ಎಫ್-2034 ಅತೀ ಜೋರಾಗಿ ಹಾಗೂ ನಿರ್ಲಕ್ಷ್ಯತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಬಂದು ಎದುರಿಗೆ ತನ್ನ ಸೈಡನಲ್ಲಿ ಮೋಟಾರ ಸೈಕಲ್ ನಂಃಕೆ.ಎ-28/ಇ.ಕೆ-0507 ನ ಮೇಲೆ

ಹೊರಟಿದ್ದ ಸುರೇಶ ತಂದೆ ಸಿದ್ದಪ್ಪ ಹಡಪದರವರಿಗೆ ನಿರ್ಲಕ್ಷತನದಿಂದ ಡಿಕ್ಕಿ ಹೊಡೆಯಿಸಿ ಅಪಘಾತ ಪಡಿಸಿ ಅವರ ತಲೆಗೆ ಹಾಗೂ ಮೈ ಕೈಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿ ಮರಣ ಹೊಂದಿರುತ್ತಾರೆ. ಈ ಮೂಲಕ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ?

3. ಹಾಗಿದ್ದರೆ ಯಾವ ಆಜ್ಞೆ?

**8.** ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆಃ-

ಅಂಶ ಸಂಖ್ಯೆ -1 : ನಕಾರಾತ್ಮಕವಾಗಿ
ಅಂಶ ಸಂಖ್ಯೆ -2 : ನಕಾರಾತ್ಮಕವಾಗಿ
ಅಂಶ ಸಂಖ್ಯೆ -3: ಅಂತಿಮ ಆದೇಶದಂತೆ

**-: ಕಾ ರ ಣ ಗ ಳು :-**

**9.** ಅಂಶ ಸಂಖ್ಯೆ **-1** ಮತ್ತು **2 :-** ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

**10**. ಆರೋಪಿಯ ವಿರುದ್ದ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ದೋಷಾರೋಪಣಾ ಪಟ್ಟಿಯಲ್ಲಿ ಚಾ.ಸಾ.1 ರಿಂದ 18 ರವರನ್ನು ಸಾಕ್ಷಿದಾರರನ್ನಾಗಿ ನಮೂದಿಸಿರುತ್ತಾರೆ. ಅದರಲ್ಲಿ ಪ್ರಾ.ಸಾ.1 ರಿಂದ 6 ರವರನ್ನು ಸಾಕ್ಷಿಗಳನ್ನಾಗಿ ವಿಚಾರಣೆ ಮಾಡಿಸಿರುತ್ತಾರೆ. ಅಂತೆಯೇ ಅಭಿಯೋಜನೆಯವರು ಮೌಖಿಕ ಸಾಕ್ಷಕ್ಕೆ ಪೂರಕವಾಗಿ ನಿಶಾನೆ ಪಿ.1 ರಿಂದ ನಿಶಾನೆ ಪಿ.10 ರವರೆಗೆ ದಾಖಲಾತಿಗಳನ್ನು ನಿಶಾನಿಸಿ ಗುರುತಿಸಿಕೊಂಡಿರುತ್ತಾರೆ.

**11.** ಈ ಪ್ರಕರಣದಲ್ಲಿ ದೂರುದಾರ ಸಾಕ್ಷಿದಾರರಾದ ಚಾ.ಸಾ.1 ರವರನ್ನು ಪ್ರಾ.ಸಾ.1 ಎಂದು ಸಾಕ್ಷ್ಯ ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಚಾಸಾ-4 ಮತ್ತು 5 ಹಾಗೂ ಆರೋಪಿಯ ಪರಿಚಯವಿದೆ. ಮೃತ ಸುರೇಶನು ತನ್ನ ಸಂಬಂಧಿಕ. ದಿಃ 18-07-2016 ರಂದು ಸಂಜೆ 7-45 ಗಂಟೆಯ ಸಮಯದಲ್ಲಿ ಮೃತ ಸುರೇಶ ಇತನು ಕೋಲ್ಹಾರದಿಂದ ಯುಕೆಪಿಗೆ ಮೋಟರ ಸೈಕಲ್ ನಂಃ ಕೆಎ-28/ಇ.ಕೆ-0507 ನೇದ್ದರ ಮೇಲೆ ಗಿಡ್ಡಪ್ಪಗೋಳ ಖಡಿ ಮಶೀನ ಹತ್ತಿರ ಹೋಗುತ್ತೀದ್ದಾಗ ಎದುರುಗಡೆಯಿಂದ ಒಂದು ಕೆ.ಎಸ್.ಆರ್.ಟಿ.ಸಿ ಬಸ್ಸು ಎದುರುಗಡೆಯಿಂದ ಅತಿ ವೇಗ ಮತ್ತು ನಿರ್ಲಕ್ಷ್ಯತನದಿಂದ ಬಂದು ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾರೆ. ಸದರಿ ಅಪಘಾತದಲ್ಲಿ ಸುರೇಶನು ಸ್ಥಳದಲ್ಲಿ ಮೃತಪಟ್ಟಿರುತ್ತಾನೆ. ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ. ನಂತರ ತಾನು ನಿಪಿ-1 ರಂತೆ ದೂರನ್ನು ನೀಡಿರುತ್ತೇನೆ ಎಂದು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

**12.** ಈ ಪ್ರಕರಣದಲ್ಲಿ ಪ್ರತ್ಯಕ್ಷ್ಯ ಸಾಕ್ಷಿದಾರರಾದ ಚಾ.ಸಾ.6 ರವರನ್ನು ಪ್ರಾ.ಸಾ.2 ಎಂದು ಸಾಕ್ಷ್ಯ ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 18.07.2016 ರಂದು ಸಾಯಂಕಾಲ 7.45 ಗಂಟೆ ಸುಮಾರಿಗೆ ವಿಜಯಪುರ ಬಾಗಲಕೋಟೆ ರಸ್ತೆ ಎನ್.ಎಚ್-218 ಕೋಲ್ಹಾರ ಮತ್ತು ಯು ಕೆ ಪಿ ಮದ್ಯದಲ್ಲಿರುವ ಗಿಡ್ಡಪ್ಪಗೋಳ -ಇವರ ಖಡಿ ಮಿಷನ ಹತ್ತಿರ ತಾನು ಮತ್ತು ಚಾಸಾ 1 ರವರು ಮೋಟಾರ ಸೈಕಲ ಮೇಲೆ ಬರುತ್ತಿದ್ದಾಗ ತಮ್ಮ ಮುಂದೆ ಮೃತ ಸುರೇಶ ಮೇಟಾರ ಸೈಕಲ ಮೇಲೆ ಹೋಗುತ್ತಿದ್ದರು ಆ ಸಂದರ್ಭದಲ್ಲಿ ಎದುರುಗಡೆಯಿಂದ ಯು.ಕೆ.ಪಿ ಯಿಂದ ಕೋಲ್ಹಾರ ಕಡೆಯಿಂದ ಒಂದು ಜೀಪು ಬರುತ್ತಿತ್ತು ಸದರಿ ಜೀಪನ್ನು ಹಿಂದಿಕ್ಕಿ ಒಂದು ಬಸ್ಸು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ಮೃತ ಸುರೇಶರವರ ಮೋಟಾರ ಸೈಕಲ್‌ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದು. ಸದರಿ ಬಸ್ಸು ನಂಬರ ಕೆ.ಎ 28/ ಎಫ್ 2034 ಸದರಿ ಬಸ್ಸು ಸರ್ಕಾರಿ ಬಸ್ಸು. ಸದರಿ ಅಪಘಾತವು ಬಸ್ಸು ಚಾಲಕನ ಅಜಾರೂಕತೆ ಅಥವಾ ಅತಿವೇಗದ ಬಸ್ಸು ಚಲಾವಣೆಯಿಂದ ಆಗಿರುತ್ತದೆ. ಸದರಿ

ಅಪಘಾತದಿಂದ ಸುರೇಶರವರು ತೀವ್ರ ಸ್ವರೂಪದ ಗಾಯಗೊಂಡಿದ್ದರು ಮತ್ತು ಸ್ಥಳದಲ್ಲಿಯೇ ಮೃತಪಟ್ಟರು ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

**13.** ಈ ಪ್ರಕರಣದಲ್ಲಿ ಸಾಂಧರ್ಬಿಕ ಸಾಕ್ಷಿದಾರರಾದ ಚಾ.ಸಾ.7 ರವರನ್ನು ಪ್ರಾ.ಸಾ.3 ಎಂದು ಸಾಕ್ಷ್ಯ ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಪಘಾತದಲ್ಲಿ ಮೃತ ಪಟ್ಟ ಸುರೇಶ ತನ್ನ ಗಂಡನಾಗಬೇಕು. ಸುಮಾರು 14 ವರ್ಷಗಳ ಹಿಂದೆ ಒಂದು ದಿನ ಚಾಸಾ 1 ರವರು ದೂರವಾಣಿ ಕರೆ ಮಾಡಿ ಕೋಲ್ಹಾರ ಯು ಕೆ ಪಿ ರಸ್ತೆಯಲ್ಲಿರುವ ಗಿಡ್ಡಪ್ಪಗೋಳರವರ ಖಡಿ ಮಿಷನ ಹತ್ತಿರ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ತಾನು ಅಪಘಾತ ಸ್ಥಳಕ್ಕೆ ಹೋಗಿ ತನ್ನ ಗಂಡನನ್ನು ನೋಡಲಾಗಿ ತೀವ್ರ ಸ್ವರೂಪದ ಗಾಯಗಳಾಗಿದ್ದವು ಹಾಗೂ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಅಪಘಾತ ಸ್ಥಳದಲ್ಲಿ ಸರ್ಕಾರಿ ಬಸ್ಸು ಇತ್ತು. ಚಾಸಾ 1 ರವನ್ನು ವಿಚಾರಿಸಲಾಗಿದ್ದು ಸದರಿ ಸರ್ಕಾರಿ ಬಸ್ಸಿನ ತಪ್ಪಿನಿಂದಾಗಿ ಸಂಜೆ 7 ಗಂಟೆ ಸುಮಾರಿಗೆ ಅಪಘಾತವಾಗಿದೆ ಎಂದು ತಿಳಿದುಬಂತು. ಸದರಿ ಬಸ್ಸು ನಂಬರ ತನಗೆ ಗೊತ್ತಿಲ್ಲ. ಸದರಿ ಅಪಘಾತ ಪಡಿಸಿದ ಬಸ್ಸು ಚಾಲಕ ಸ್ಥಳದಲ್ಲಿದ್ದನು ಆದರೆ ತಾನು ಆತನನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

**14.** ಈ ಪ್ರಕರಣದಲ್ಲಿ ತನಿಖಾಧಿಕಾರಿ ಸಾಕ್ಷಿದಾರರಾದ ಚಾ.ಸಾ.18 ರವರನ್ನು ಪ್ರಾ.ಸಾ.4 ಎಂದು ಸಾಕ್ಷ್ಯ ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 04-08-2016 ರಂದು ಚಾಸಾ-17 ರವರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದುಕೊಂಡು ಮೃತ ಸುರೇಶ ಸಿದ್ದಪ್ಪ ಹಡಪದರವರ ಮರಣೋತ್ತರ ಪರೀಕ್ಷೆಯ ವರದಿಯನ್ನುನಿಪಿ-3 ರಂತೆ ಚಾಸಾ-15 ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡು ತನಿಖೆ ಪೂರ್ಣಗೊಂಡಿದ್ದರಿಂದ ಮಾನ್ಯ ನ್ಯಾಯಾಲಯುಕ್ಕೆ ಆರೋಪಿಯ ವಿರುದ್ದ ಅಂತಿಮ

ವರದಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

**15.** ಈ ಪ್ರಕರಣದಲ್ಲಿ ಇನ್ಸ್ಪೆಕ್ಟರ್ ತನಿಖಾಧಿಕಾರಿ ಸಾಕ್ಷಿದಾರರಾದ ಚಾ.ಸಾ.17 ರವರನ್ನು ಪ್ರಾ.ಸಾ.5 ಎಂದು ಸಾಕ್ಷ್ಯ ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:19.07.2016 ರಂದು ಈ ಕಡತದ ಮುಂದಿನ ತನಿಖೆಯನ್ನು ಪಿಎಸ್ಐ ರವಿಂದ್ರ ನಾಯ್ಕೋಡಿರವರಿಂದ ವಹಿಸಿಕೊಂಡು ಮುಂದುವರೆಸಿ, ನಂತರ ಘಟನಾ ಸ್ಥಳವಾದ ಎನ್.ಎಚ್.-218 ಚನ್ನಮಲಪ್ಪ ಇವರ ಖಡಿ ಮಷೀನ ಹತ್ತಿರ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಗುನ್ನ ಜಾಗದ ಪಂಚನಾಮೆ ಮಧ್ಯಾಹ್ನ 1.30 ರಿಂದ 2.30 ರವರೆಗೆ ಜರುಗಿಸಲಾಯಿತು. ನಂತರ ಘಟನಾ ಸ್ಥಳದಲ್ಲಿದ್ದ ವಾಹನ ಸಂಖ್ಯೆ ಬಸ್ ಸಂಖ್ಯೆ ಕೆ.ಎ.-28/ಎಫ್- 2034 ಹಾಗೂ ಟಿ.ವಿ.ಎಸ್. ಕಂಪನಿಯ ಮೊಟರ ಸೈಕಲ ಸಂಖ್ಯೆ ಕೆ.ಎ.28/ಇಕೆ.0507 ಗಳನ್ನು ಮೋಟರ ವಾಹನ ಪರೀಕ್ಷೆ ಸಲುವಾಗಿ ತಡೆಹಿಡಲಾಯಿತು. ಸದರಿ ಕಾಲಕ್ಕೆ ಹಾತ ನಕಾಶೆಯನ್ನು ಮತ್ತು ಛಾಯಾ ಚಿತ್ರವನ್ನು ತಗೆದು, ಚಾಸ-8, 10, 11, 12, 13 ರವರ ಹೇಳಿಕೆಯನು ಪಡೆದುಕೊಂಡಿರುತ್ತೇನೆ. ದಿ:21.07.2016 ರಂದು ಆರೋಪಿ ಮತ್ತು ಬಸ್ಸ ನಿರ್ವಾಹಕ ಹಾಜರಾತಿ ಇದ್ದ ಕುರಿತು ದೃಡಿಕರಣ ಪತ್ರ ಪಡೆದುಕೊಂಡಿರುತ್ತೇನೆ. ಅದೇ ದಿನ ಮಧ್ಯಾಹ್ನ 1.00 ಗಂಟೆಗೆ ಆರೋಪಿತನು ಹಾಜರಾಗಿ ಸದರಿಯವನನ್ನು ದಸ್ತಗಿರಿ ಮಾಡಿ ನಿಯಮ ಪಾಲಿಸಿ ಜಾಮಿನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ಅದೇ ದಿನ ಕೆ.ಎಸ್.ಆರ್.ಟಿ.ಸಿ.ವಾಹನದ ನಷ್ಟ ಭರಿತ ಬಾಂಡನ್ನು ನ್ಯಾಯಾಲಯಕ್ಕೆ ಪಡೆದುಕೊಂಡು ಬಾಬುಸಾಹೆಬ ರಾಜೇಸಾಬ ಬಾಗವಾನ ಸಾರಿಗೆ ನಿರ್ಯಂತ್ರಣಾಧಿಕಾರಿ ನಿಡುಗುಂದಿ ರವರೆಗೆ ಬಿಟ್ಟು ಕೊಡಲಾಯಿತು. ಅದೇ ದಿನ ಮೊಟರ ಸೈಕಲ ನಂಬರ ಕೆ.ಎ-28/ಇ.ಕೆ,-0507 ರ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಚಾಸಾ-1 ರವರಿಗೆ ಬಿಡುಗಡೆಗೊಳಿಸಲಾಯಿತು. ದಿ:03.08.2016 ರಂದು ಐ.ಎಮ್.ವ್ಹಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ನಂತರ ತನಗೆ ವರ್ಗಾವಣೆ ಆಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-12 ರವರಿಗೆ ಹಸ್ತಾಂತರಿಸಿರುತ್ತೇನೆ ಹಾಗೂ ಅದೇ ದಿನ

ಮೃತನ ಪಿ.ಎಮ್ ವರದಿಯನ್ನು ಪಡೆದು ಕಡತಕ್ಕೆ ಅಳವಳಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

**16.** ಈ ಪ್ರಕರಣದಲ್ಲಿ ಇನ್ಸ್ಪೆಕ್ಟರ್ ತನಿಖಾಧಿಕಾರಿ ಸಾಕ್ಷಿದಾರರಾದ ಚಾ.ಸಾ.16 ರವರನ್ನು ಪ್ರಾ.ಸಾ.6 ಎಂದು ಸಾಕ್ಷ್ಯ ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:18.07.2016 ರಂದು ತಾನು ಠಾಣಾದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಲಿಖೀತ ದೂರನ್ನು ನೀಡಿದ್ದು ಸದರಿದನ್ನು ಪಡೆದು ಠಾಣಾ ಗುನ್ನ ಸಂಖ್ಯೆ:93/2016 ದಾಖಲಿಸಿಕೊಳ್ಳಲಾಯಿತು. ದಿನಾಂಕ:19.07.2016 ರಂದು ರೋಣಿಹಾಳ ಸರ್ಕಾರಿ ಆಸ್ಪತ್ರೆಗೆ ಭೇಟ್ಟಿ ನೀಡಿ ಮೃತ ಸುರೇಶ ಸಿದ್ಧಪ್ಪ ಹಡಪದರವರ ಶವ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಚಾಸಾ-7 ರಿಂದ 9 ರವರ ಹೇಳಿಕೆಯನ್ನು ಪಡೆದುಕೊಂಡೆನು. ನಂತರ ಮುಂದಿನ ತನಿಖೆಯನ್ನು ಚಾಸಾ-17 ರವರಿಗೆ ವಹಿಸಿಕೊಟ್ಟಿರುವುದಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

17. ಈ ಮೇಲ್ಕಂಡ ಅಭಿಯೋಜನೆಯ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಈ ಕೆಳಕಂಡಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ:-

ನಿಶಾನೆ ಪಿ.1 ರಂತೆ ದೂರನ್ನು , ನಿಪಿ-2 ರಂತೆ ಶವ ಪಂಚನಾಮೆಯನ್ನು , ನಿಪಿ-3 ರಂತೆ ಶವ ಪರೀಕ್ಷಾ ವರದಿಯನ್ನು , ನಿಪಿ-4 ರಂತೆ ಮೋಟರ ವಾಹನ ಪರೀಕ್ಷೆ ವರದಿಯನ್ನು, ನಿಪಿ-5 ರಂತೆ ಸ್ಥಳ ಮಹಜರನ್ನು , ನಿಪಿ-6 ರಂತೆ ಕಚ್ಚಾ ನಕಾಶೆಯನ್ನು, ನಿಪಿ-7 ರಂತೆ ಚಾಲಕನು ಸದರಿ ದಿನ ಬಸ್ಸನ್ನು ನಡೆಸುತ್ತೀರುವ ಬಗ್ಗೆ ದೃಡಿಕರಣ ಪತ್ರುವನ್ನು , ನಿಪಿ-8 ಮತ್ತು 9

ರಂತೆ ಮುಚ್ಚಳಿಕೆ ಪತ್ರಗಳನುನ ಹಾಗೂ ನಿಪಿ-10 ರಂತೆ ಪ್ರಥಮ ವರ್ತಮಾನ ವರದಿಯನ್ನು ಹಾಜರುಪಡಿಸಿರುತ್ತಾರೆ .

18. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 279 ಮತ್ತು 304(ಎ) ರ ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಕುರಿತಾಗಿ ಭಾರತೀಯ ದಂಡ ಸಂಹಿತೆಯ ಮೇಲ್ಕಂಡ ಅಪರಾಧಿಕಾ ಕೃತ್ಯದ ಘಟಕಾಂಶಗಳನ್ನು ಪರಿಶೀಲಿಸಲು ಸದರಿ ಕಲಂಗಳನ್ನು ಕೂಲಂಕುಷವಾಗಿ ಈ ಕೆಳಕಂಡಂತೆ ಪರೀಶಿಲಿಸಲಾಗಿರುತ್ತದೆಃ-

* **ಭಾರತೀಯ ದಂಡ ಸಂಹಿತೆ ಕಲಂ 279 ಈ ಕೆಳಕಂಡಂತೆ ಇದೆಃ-**

ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ವಾಹನ ನಡೆಸುವುದು ಅಥವಾ ಸವಾರಿ ಮಾಡುವುದುಃ-

ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಯಾವನೇ ಇತರ ವ್ಯಕ್ತಿಗೆ ಗಾಯ ಅಥವಾ ಕ್ಷತಿಯುಂಟು ಮಾಡುವ ಹಾಗೆ ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ಅಥವಾ ನಿರ್ಲಕ್ಷದಿಂದ ಯಾವನೇ ವ್ಯಕ್ತಿಯು ವಾಹನ ನಡೆಸಿದರೆ ಅಥವಾ ಸವಾರಿ ಮಾಡಿದರೆ ಅವನು ಆರು ತಿಂಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

* ಭಾರತೀಯ ದಂಡ ಸಂಹಿತೆ ಕಲಂ **304-**ಎ ಈ ಕೆಳಕಂಡಂತೆ ಇದೆಃ**-**

**304-**ಎ ನಿರ್ಲಕ್ಷದಿಂದ ಮರಣವನ್ನುಂಟು ಮಾಡುವದು**.**

ಭಾರತೀಯ ದಂಡ ಸಂಹಿತೆಯ (IPC) ಸೆಕ್ಷನ್ 304A ನಿರ್ಲಕ್ಷ್ಯ ಅಥವಾ ದುಡುಕಿನ ಕೃತ್ಯಗಳಿಂದ (rash or negligent act) ಯಾರದಾದರೂ ಸಾವಿಗೆ ಕಾರಣವಾಗುವುದರ

ಬಗ್ಗೆ ತಿಳಿಸುತ್ತದೆ. ಅಪರಾಧಿ ನರಹತ್ಯೆಯ (culpable homicide) ಉದ್ದೇಶವಿಲ್ಲದೆ, ಕೇವಲ ನಿರ್ಲಕ್ಷ್ಯದಿಂದ ಇತರರ ಸಾವಿಗೆ ಕಾರಣ

19. ಆರೋಪಿತನ ವಿರುದ್ಧ ದಿನಾಂಕಃ 18-07-2016 ರಂದು ಸಂಜೆ 19-45 ಗಂಟೆ ಸುಮಾರಿಗೆ ಕೋಲ್ಹಾರ ಪೋಲಿಸ್ ಠಾಣಾ ಹದ್ದಿ ಪೈಕಿ ವಿಜಯಪೂರ -ಬಾಗಲಕೋಟ ಎಚ್.ಎಚ್-218 ಡಾಂಬರ ರಸ್ತೆಯ ಮೇಲೆ ಕೋಲ್ಹಾರದ ಚನ್ನಮಲ್ಲಪ್ಪ ಗಿಡ್ಡಪ್ಪಗೋಳರವರ ಖಡಿ ಮಶೀನದ ಮುಂದೆ ರಸ್ತೆಯ ಮೇಲೆ ಆರೋಪಿಯು ಬಸ್ಸ ನಂಃಕೆ.ಎ-28/ಎಫ್-2034 ನೇದ್ದನ್ನು ಬಾಗಲಕೋಟ ಕಡೆಯಿಂದ ವಿಜಯಪೂರ ಕಡೆಗೆ ಅತಿ ಜೋರಾಗಿ ಹಾಗೂ ನಿರ್ಲಕ್ಷ್ಯತನದಿಂದ ಮಾನವೀಯ ಜೀವಕ್ಕೆ ಅಪಾಯಕರವಾಗುವ ರೀತಿಯಲ್ಲಿ ನಡೆಯಿಸಿಕೊಂಡು ತನ್ನ ಎದುರಿಗೆ ತನ್ನ ಸೈಡಿನಲ್ಲಿ ಸುರೇಶ ತಂದೆ ಸಿದ್ದಪ್ಪ ಹಡಪದರವರು ಚಾಲನೆ ಮಾಡುತ್ತಿದ್ದ ಮೋಟಾರ ಸೈಕಲ್ ನಂಃ ಕೆಎ-28/ಇ.ಕೆ-0507 ನೇದ್ದಕ್ಕೆ ಡಿಕ್ಕಿ ಪಡಿಸಿ ಅಪಘಾತಪಡಿಸಿದ್ದು, ಸದರಿ ಅಪಘಾತದಲ್ಲಿ ಆತನ ತಲೆಗೆ ಹಾಗೂ ಮೈ ಕೈಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿ ಮರಣ ಹೊಂದಿರುತ್ತಾರೆ ಎಂದು ಆರೋಪಿತನ ವಿರುದ್ಧ ಆಪಾದನೆ ಇರುತ್ತದೆ.

20. ಈ ಮೇಲ್ಕಂಡಂತೆ ಅಭಿಯೋಜನೆ ಪರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಈ ಪ್ರಕರಣದ ಫಿರ್ಯಾದುದಾರರು ಹಾಗೂ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಮೇಲ್ಕಂಡ ದಿನಾಂಕದಂದು ಅಪಘಾತ ಏರ್ಪಟ್ಟು ಸದರಿ ಅಪಘಾತದ ಪರಿಣಾಮ ಸುರೇಶ ಹಡಪದರವರು ಮರಣ ಹೊಂದಿರುವುದು ನಿಶಾನೆ ಪಿ.2 ರ ಶವ ಪಂಚನಾಮೆ ಮತ್ತು ನಿಶಾನೆ ಪಿ.3 ಶವ ಪರೀಕ್ಷಾ ತನಿಖಾ ವರದಿಯಿಂದ ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಅಂತೆಯೇ ಅಪಘಾತಕ್ಕೆ ಕಾರಣವಾದ ವಾಹನವನ್ನು ಪರಿಶೀಲಿಸಿ ನೀಡಿರುವ ಮೋಟರ ವಾಹನ ಪರೀಕ್ಷಾ ವರದಿ ನಿಪಿ-4 ನ್ನು ಪರಿಶೀಲಿಸಿದಾಗ ಸದರಿ ವಾಹನದ ಅಂದರೆ ವಾಹನ ಸಂಖ್ಯೆ ಕೆ ಎ-28 ಎಫ್ 2034 ರ ವಾಹನವನ್ನು ಪರೀಕ್ಷಿಸಿದಾಗ ವಾಹನದ ಮುಂದಿನ

ಬಂಪರ ಜಖಂಗೊಂಡಿರುವುದು ಕಂಡು ಬರುತ್ತದೆ ಹಾಗೂ ವಾಹನ ಸಂಖ್ಯೆ ಕೆಎ-28/ಇ.ಕೆ.-0507 ನ್ನು ಪರೀಕ್ಷಿಸಿದಾಗ ವಾಹನದ ಮುಂದಿನ ಹ್ಯಾಂಡಲ ಬಾರ ಬೆಂಡಾಗಿರುವುದು , ಮುಂದಿನ ಇಂಡಿಕೇಟರಗಳು ಒಡೆದಿರುವುದು , ಮುಂದಿನ ನಂಬರ ಪ್ಲೇಟ ಜಖಂಗೊಂಡಿರುವುದು , ಸೈಲೆನಸ್ಸರ ದ ಹಿಂದಿನ ಬ್ರೇಕ ಹಾಗೂ ಇಂಡಿಕೇಟರ ಜಖಂಗೊಂಡಿರುವುದು ಕಂಡು ಬರುತ್ತದೆ. ಹಾಗಾಗಿ ಸದರಿ ಅಪಘಾತವು ವಾಹನದ ಯಾವುದೇ ಯಾಂತ್ರೀಕ ದೋಷದಿಂದ ಉಂಟಾಗಿರುವುದಿಲ್ಲ ಎಂಬುದು ನಿಶಾನೆ ಪಿ.4 ಮೋಟರ ವಾಹನ ಪರೀಕ್ಷಾ ವರದಿಯಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಅಪಘಾತವು ಆರೋಪಿತನ ತಪ್ಪಿನಿಂದ ಏರ್ಪಟ್ಟಿರುತ್ತದೆ ಎಂಬುದರ ಕುರಿತು ನಿರ್ಣಯಿಸಲು ಅಪಘಾತವನ್ನು ನೋಡಿದ ಬಗ್ಗೆ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಶೀಲಿಸುವುದು ಬಹಳ ಮುಖ್ಯವಾಗಿರುತ್ತದೆ.

21. ಪ್ರಸ್ತುತ ನ್ಯಾಯಾಲಯದ ಮುಂದಿರುವ ಪ್ರಶ್ನೆ ಸದರಿ ಅಪಘಾತಕ್ಕೆ ಆರೋಪಿತನ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣ ಎಂಬುದಾಗಿರುತ್ತದೆ. ಈ ಕುರಿತು ಪರಿಶೀಲಿಸಲಾಗಿ ಪ್ರಾ.ಸಾ.1 ರಿಂದ ಪ್ರಾಸಾಃ 3 ರವರುಗಳು ದೂರುದಾರರು, ಪ್ರತ್ಯಕ್ಷ ಹಾಗೂ ಸಾಂಧರ್ಬಿಕ ಸಾಕ್ಷಿದಾರರಾಗಿರುತ್ತಾರೆ.

22. ಅಪಘಾತವು ಆರೋಪಿತನು ಬಸ್ಸನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ ಸುರೇಶ ತಂದೆ ಸಿದ್ದಪ್ಪ ಹಡಪದರವರು ಚಾಲನೆ ಮಾಡಿಕೊಂಡು ಬರುತ್ತಿದ್ದ ಮೋಟರ ಸೈಕಲ್ ಗೆ ಡಿಕ್ಕಿಪಡಿಸಿದ ಪರಿಣಾಮ ಸುರೇಶ ತಂದೆ ಸಿದ್ದಪ್ಪ ಹಡಪದರವರು ತೀವ್ರ ಸ್ವರೂಪದ ಗಾಯಗಳಾಗಿ ಮೃತಪಟ್ಟಿರುತ್ತಾರೆ ಎಂಬುದು ಅಭಿಯೋಜನೆಯ ವಾದವಾಗಿರುತ್ತದೆ.

23. ಇದಕ್ಕೆ ಪ್ರತಿಯಾಗಿ ಮಾನ್ಯ ಆರೋಪಿ ಪರ ವಕೀಲರು ದಿಃ18-07-2016 ರಂದು ಅಪಘಾತ ಸಂಭವಿಸಿದ ಸಮಯದಲ್ಲಿ ಆರೋಪಿತನು ಅಪಘಾತಕ್ಕೆ ಕಾರಣವಾದ ವಾಹನವನ್ನು

ಚಾಲನೆ ಮಾಡುತ್ತಿರಲಿಲ್ಲವೆಂದು ಎಂಬುದರ ಕುರಿತಾಗಿ ವಿವಾದವನ್ನು ಮಾಡಿರುವದಿಲ್ಲ. ಆದರೆ ಆರೋಪಿತನ ನಿರ್ಲಕ್ಷತನದಿಂದ ಅಪಘಾತವಾಗಿರುವದಿಲ್ಲ ಬದಲಾಗಿ ಚಾಸಾ-1 ರವರ ಮಾವನ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ ಎಂದು ವಾದವನ್ನು ಮಂಡಿಸಿರುತ್ತಾರೆ.

24. ಅಪಘಾತವು ಬಾಗಲಕೋಟ-ವಿಜಯಪುರ ಎನ್.ಎಚ್.218 ರಸ್ತೆಯ ಮೇಲೆ ಸಂಭವಿಸಿರುತ್ತದೆ. ಅಂತೆಯೇ ಅಪಘಾತ ಸಂಭವಿಸಿದ ರಸ್ತೆಯು ಎನ್ ಎಚ್ 218 ಡಾಂಬರೀಕರಣದಿಂದ ಕೂಡಿದ ರಸ್ತೆಯಾಗಿರುವದು ಕಂಡು ಬರುತ್ತದೆ.

25. ಈ ಕುರಿತು ಪರಿಶೀಲಿಸಲಾಗಿ ಪ್ರಾರಂಭಿಕ ಹಂತದಲ್ಲಿ ಆರೋಪಿತನು ಅಪಘಾತ ಸಂಭವಿಸಿದ ದಿನದಂದು ಅಪಘಾತಕ್ಕೆ ಕಾರಣವಾದ ಬಸ್ ನ್ನು ಚಾಲನೆ ಮಾಡುತ್ತಿದ್ದನು ಎಂಬುದನ್ನು ನಿರ್ಣಯಿಸಬೇಕಾಗುತ್ತದೆ. ಈ ಕುರಿತು ಪರಿಶೀಲಿಸಲಾಗಿ ಈ ಪ್ರಕರಣದ ಫಿರ್ಯಾದುದಾರರು ತಮ್ಮ ದೂರಿನಲ್ಲಿ ಆರೋಪಿಯು ಬಸ್ಸಿನ ಚಾಲಕನಾಗಿದ್ದನು ಎಂದು ತಮ್ಮ ದೂರಿನಲ್ಲಿ ನಮೂದಿಸಿರುತ್ತಾರೆ. ಅಂತೆಯೇ ಅಪಘಾತ ಸಂಭವಿಸಿದ ಸ್ಥಳದಲ್ಲಿ ಜರುಗಿಸಿದ ಮಹಜರ್ ಪ್ರಕ್ರಿಯೆಯಲ್ಲೂ ಕೂಡ ಅಪಘಾತಕ್ಕೆ ಕಾರಣವಾದ ವಾಹನವನ್ನು ಆರೋಪಿಯು ಚಾಲನೆ ಮಾಡುತ್ತಿದ್ದನು ಎಂದು ಉಲ್ಲೇಖಿಸಿರುತ್ತದೆ. ಅಂತೆಯೇ ಆರೋಪಿತನು ತನಿಖಾಧಿಕಾರಿಗಳ ಮುಂದೆ ಹಾಜರಾಗಿ ಠಾಣಾ ಜಾಮೀನನ್ನು ಪಡೆದಿರುತ್ತಾನೆ. ಸದರಿ ಜಾಮೀನಿನ ದಾಖಲಾತಿಯಲ್ಲಿ ಆರೋಪಿತನ ಸಹಿ ಇರುತ್ತದೆ.

26. ಕ್ರಿಮಿನಲ್ ಪ್ರಕರಣಗಳಲ್ಲಿ ರುಜುವಾತಿನ ಹೊಣೆಗಾರಿಕೆಯು ಅಭಿಯೋಜನೆಯ ಮೇಲಿರುತ್ತದೆ. ಸದರಿ ಅಭಿಯೋಜನೆಯು ಆರೋಪಿತನ ವಿರುದ್ಧದ ಆರೋಪಗಳ ಕುರಿತು ಸಂಶಯಾತೀತವಾಗಿ ರುಜುವಾತು ಪಡಿಸಬೇಕಾಗುತ್ತದೆ. ಆದರೆ ಆರೋಪಿತನು ತನ್ನ ಪ್ರತಿವಾದ ರಕ್ಷಣೆಯಲ್ಲಿ ತಾನು ಅಪಘಾತ ಸಂಭವಿಸಿದ ಸಮಯದಲ್ಲಿ ಇರಲಿಲ್ಲ ಎಂಬ ಪ್ರತಿರಕ್ಷಣೆಯನ್ನು ತೆಗೆದುಕೊಂಡಿರುವುದಿಲ್ಲ. ಹಾಗಾಗಿ ಆರೋಪಿತನು ಅಪಘಾತ ಸಂಭವಿಸಿದ ಸಮಯದಲ್ಲಿ

ಅಪಘಾತಕ್ಕೆ ಕಾರಣವಾದ ಬಸ್ಸನ್ನು ಚಾಲನೆ ಮಾಡುತ್ತಿದ್ದನು ಎಂದು ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ.

27. ಈ ಕುರಿತು ಅಭಿಯೋಜನೆಯ ಸಾಕ್ಷ್ಯವನ್ನು ಪರಿಶೀಲಿಸಿದಾಗ ಫಿರ್ಯಾದಿದಾರರು, ಪ್ರತ್ಯಕ್ಷ ಮತ್ತು ಸಾಂಧರ್ಬಿಕ ಸಾಕ್ಷಿದಾರರಾದ ಪ್ರಾ.ಸಾ.1 ಹಾಗೂ 2 ರವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 18-07-2016 ರಂದು ಸಂಜೆ 7-45 ಗಂಟೆಯ ಸಮಯದಲ್ಲಿ ಬಾಗಲಕೋಟ- ವಿಜಯಪೂರ ಎನ್ ಎಚ್ 218 ರಸ್ತೆಯ ಮೇಲೆ ಚನ್ನಮಲ್ಲಪ್ಪ ಗಿಡ್ಡಪಗೋಳ ರವರ ಖಡಿ ಮಷೀನ ಮುಂದಿರುವ ರಸ್ತೆಯ ಹತ್ತಿರ ಆರೋಪಿಯು ತನ್ನ ಬಸ್ಸನ್ನು ಮೃತ ಸುರೇಶ ತಂದೆ ಸಿದ್ದಪ್ಪ ಹಡಪದರವರು ಚಾಲನೆ ಮಾಡುತ್ತಿದ್ದ ಮೋಟರ ಸೈಕಲ್ ಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾರೆ ಹಾಗೂ ಸದರಿ ಅಪಘಾತದಲ್ಲಿ ಸುರೇಶ ತಂದೆ ಸಿದ್ದಪ್ಪ ಹಡಪದರವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಮೃತಪಟ್ಟಿರುತ್ತಾರೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಆದರೆ ಸದರಿ ಸಾಕ್ಷಿದಾರರು ಆರೋಪಿತನು ತನ್ನ ಬಸ್ಸನ್ನು ಅತೀ ಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಬಂದು ಮೃತ ಸುರೇಶ ತಂದೆ ಸಿದ್ದಪ್ಪ ಹಡಪದರವರು ಚಾಲನೆ ಮಾಡುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿರುತ್ತಾರೆ ಎಂಬುದರ ಕುರಿತು ನಿರ್ಧಿಷ್ಟವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಅದೇ ರೀತಿಯಾಗಿ ಸಾಂಧರ್ಬಿಕ ಸಾಕ್ಷಿದಾರರಾದ ಪ್ರಾ.ಸಾಃ3 ರವರು ಕೂಡ ಅಪಘಾತವಾದ ಕುರಿತು ಸಾಕ್ಷ್ಯವನ್ನು ನುಡಿದಿರುತ್ತಾರೆ. ಆದರೆ ಸದರಿ ಸಾಕ್ಷಿದಾರರು ಆರೋಪಿತನು ತನ್ನ ಬಸ್ಸನ್ನು ಅತೀ ಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಬಂದು ಮೃತ ಸುರೇಶ ತಂದೆ ಸಿದ್ದಪ್ಪ ಹಡಪದರವರು ಚಾಲನೆ ಮಾಡುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿರುತ್ತಾರೆ ಎಂಬುದರ ಕುರಿತು ನಿರ್ಧಿಷ್ಟವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಹಾಗಾಗಿ ಸದರಿ ಪ್ರಾ.ಸಾ-1 ರಿಂದ 3 ರವರ ಸಾಕ್ಷ್ಯಗಳ ಕುರಿತು ಸಂಶಯವನ್ನುಂಟು ಮಾಡುತ್ತದೆ.

**28.** ಅಭಿಯೋಜನೆಯವರು ನಿಪಿ-1 ರಂತೆ ಪ್ರಾ.ಸಾಃ 1 ರವರು ದಿಃ 18-07-2016 ರಂದು ನೀಡಿರುವಂತಹ ದೂರನ್ನು ಹಾಜರಪಡಿಸಿದ್ದು, ಸದರಿ ದೂರನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ದಿಃ 18-07-2016 ರಂದು ತಾವೆಲ್ಲರೂ ಹಾಗೇ ಊರಿಗೆ ಹೊರಟು ತಾನು ಮತ್ತು ಪರಶುರಾಮ ಚಲವಾದಿ ಇತನು ಆತನ ಮೋಟರ ಸೈಕಲ ಮೇಲೆ ಹೊರಟಿದ್ದು ತಮ್ಮ ಮಾವನು ತಮ್ಮ ಮುಂದೆ ಮುಂದೆಯಾಗಿ ಸುಮಾರು 200 ಪೂಟ ಅಂತರದಲ್ಲಿ ತನ್ನ ಮೋಟರ ಸೈಕಲ್ ಮೇಲೆ ಗಿಡ್ಡಪ್ಪಗೋಳರವರ ಖಡಿ ಮಷೀನದ ದಾರಿ ದಾಟಿ ಮುಂದೆ ಹೊರಟಾಗ ಕೋಲ್ಹಾರ ಯು.ಕೆ.ಪಿ ಕ್ರಾಸ ಕಡೆಯಿಂದ ಒಂದು ಕೆ.ಎಸ್.ಆರ್.ಟಿ.ಸಿ ಬಸನ್ನು ಅದರ ಚಾಲಕನು ಬಹಳ ಜೊರಿನಿಂದ ನಡೆಸಿಕೊಂಡು ಬಂದು ತನ್ನ ಮುಂದೆ ಹೊರಟ ಯಾವುದೇ ಒಂದು ಜೀಪಿಗೆ ಓವರಟೇಕ ಮಾಡಿ ಬಂದು ತಮ್ಮ ಮುಂದೆ ಹೊರಟ ತಮ್ಮ ಮಾವನ ಮೋಟರ ಸೈಕಲ್ ಕ್ಕೆ ಡಿಕ್ಕಿ ಹಾಯಿಸಿ ಅಪಘಾತ ಪಡಿಸಿ ಬಸ್ಸ ನಿಲ್ಲಿಸಿದನು . ಆಗ ತಾವು ಬಸ್ಸಿನ ಹತ್ತಿರ ಹೋಗಿ ನೋಡಲು ಮೋಟರ ಸೈಕಲ್ ಬಸ್ಸಿನ ಎಡಗಡೆ ಮುಂದಿನ ಗಾಲಿಯ ಮುಂದೆ ಸಿಕ್ಕಿಕೊಂಡಿತ್ತು ಮತ್ತು ತಮ್ಮ ಮಾವನು ಬಸ್ಸ ಡ್ರೈವರ ಸೈಡದ ಮುಂದಿನ ಗಾಲಿಯ ಹಿಂದೆ ಬಿದ್ದಿದ್ದನು. ಆತನ ತಲೆಗೆ ಗಾಯವಾಗಿ ಬಾಯಿ ಕಿವಿಯಿಂದ ರಕ್ತ ಬಂದಿತ್ತು. ಬಲಗೈ ಮತ್ತು ಮೈ ಕೈಗೆ ಪೆಟ್ಟು ಗಾಯಗಳಾಗಿದ್ದವು . ಆತನು ಸ್ಥಳದಲ್ಲಿಯೇ ಸತ್ತಿದ್ದನು. ಈ ಅಪಘಾತವಾದಾಗ ಇಂದು ಸಾಯಂಕಾಲ 7-45 ಗಂಟೆ ಗಂಟೆ ಆಗಿತ್ತು ಎಂದು ಚಾಲಕನ ವಿರುದ್ದ ಕ್ರಮವನ್ನು ತಗೆದುಕೊಳ್ಳುವಂತೆ ಕೋರಿರುವದು ಕಂಡು ಬರುತ್ತದೆ .

**29**. ಈ ಮೇಲ್ಕಂಡ ನಿಪಿ-1 ರಲ್ಲಿನ ಉಲ್ಲೇಖದ ಕುರಿತಾಗಿ ಫಿರ್ಯಾಧಿದಾರರಾದ ಪ್ರಾಸಾಃ 1 ರವರು ಸಾಕ್ಷ್ಯದ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ ಸದರಿ ಪ್ರಾ. ಸಾಃ 1 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಅಪಘಾತವಾದ ಸ್ಥಳದಲ್ಲಿ ಹಾಜರಿದ್ದ ಬಗ್ಗೆ ನಿರ್ಧಿಷ್ಟವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ . ಅದೇ ರೀತಿಯಾಗಿ ಪ್ರಾ.ಸಾಃ 1 ರವರು ತಮ್ಮ ಪಾಟೀ ಸವಾಲಿನಲ್ಲಿ ತಮ್ಮಿಂದ ಮೃತ ಸುರೇಶ ತಂದೆ ಸಿದ್ದಪ್ಪ ಹಡಪದ ನು 200 ಮೀಟರ ಅಂತರದಲ್ಲಿದ್ದನು . ತಾನು 200 ಮೀಟರ ಅಂತರದಿಂದ ಬಸ್ಸನ್ನು ನೋಡಿರುತ್ತೇನೆ.

ಬಸ್ಸು ಯಾವ ವೇಗದಲ್ಲಿ ಬರುತ್ತಿತ್ತು ಎಂಬುದರ ಬಗ್ಗೆ ತನಗೆ ಗೊತ್ತಿಲ್ಲ ಮತ್ತು ತನಗೆ ನಿಪಿ-1 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ಗೊತ್ತಿಲ್ಲ ಎಂದು ನುಡಿದಿರುವುದು ಕಂಡು ಬರುತ್ತದೆ.

30. ಅದೇ ರೀತಿಯಾಗಿ ಈ ಪ್ರಕರಣದಲ್ಲಿ ಇನ್ನೊರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ. ಸಾಃ 2 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 18-07-2016 ರಂದು ಸಾಯಂಕಾಲ 7-45 ಗಂಟೆಗೆ ವಿಜಯಪುರ ಬಾಗಲಕೋಟೆ ರಸ್ತೆ ಎನ್.ಎಚ್-218 ಕೋಲ್ಹಾರ ಮತ್ತು ಯು ಕೆ ಪಿ ಮದ್ಯದಲ್ಲಿರುವ ಗಿಡ್ಡಪ್ಪಗೋಳ -ಇವರ ಖಡಿ ಮಿಷನ ಹತ್ತಿರ ತಾನು ಮತ್ತು ಚಾಸಾ 1 ರವರು ಮೋಟಾರ ಸೈಕಲ ಮೇಲೆ ಬರುತ್ತಿದ್ದಾಗ ತಮ್ಮ ಮುಂದೆ ಮೃತ ಸುರೇಶ ಮೋಟಾರ ಸೈಕಲ ಮೇಲೆ ಹೋಗುತ್ತಿದ್ದರು ಆ ಸಂದರ್ಭದಲ್ಲಿ ಎದುರುಗಡೆಯಿಂದ ಯು.ಕೆ.ಪಿ ಯಿಂದ ಕೋಲ್ಹಾರ ಕಡೆಯಿಂದ ಒಂದು ಜೀಪು ಬರುತ್ತಿತ್ತು ಸದರಿ ಜೀಪನ್ನು ಹಿಂದಿಕ್ಕಿ ಒಂದು ಬಸ್ಸು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ಮೃತ ಸುರೇಶರವರ ಮೋಟಾರ ಸೈಕಲ್‌ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದು. ಸದರಿ ಬಸ್ಸು ನಂಬರ ಕೆ.ಎ 28/ ಎಫ್ 2034 ಸದರಿ ಬಸ್ಸು ಸರ್ಕಾರಿ ಬಸ್ಸು. ಸದರಿ ಅಪಘಾತವು ಬಸ್ಸು ಚಾಲಕನ ಅಜಾರೂಕತೆ ಅಥವಾ ಅತಿವೇಗದ ಬಸ್ಸು ಚಲಾವಣೆಯಿಂದ ಆಗಿರುತ್ತದೆ. ಸದರಿ ಅಪಘಾತದಿಂದ ಸುರೇಶರವರು ತೀವ್ರ ಸ್ವರೂಪದ ಗಾಯಗೊಂಡಿದ್ದರು ಮತ್ತು ಸ್ಥಳದಲ್ಲಿಯೇ ಮೃತರಾದರು ಎಂದು ನುಡಿದಿರುತ್ತಾರೆ

31. ಪ್ರಾ.ಸಾ -2 ರವರು ತಮ್ಮ ಪಾಟೀ ಸವಾಲಿನಲ್ಲಿ ಅಪಘಪಾತ ಸ್ಥಳದಿಂದ ಕೋಲಾರ ಕಡೆ ಹೋಗುವಾಗ ರಸ್ತೆಯು ಏರು ಇದೆ ಎಂದರೆ ಸರಿ. ಅಪಘಾತ ಸಮಯದಲ್ಲಿ ರಾತ್ರಿಯಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಮಬ್ಬು ಕತ್ತಲು ಇತ್ತು ಎಂದು ನುಡಿಯುವರು. ಕೋಲ್ಹಾರದಿಂದ ಅಪಘಾತ ಸ್ಥಳದ ಕಡೆಗೆ ಬರುವ ವಾಹನಗಳು ವೇಗವಾಗಿ ಬರುತ್ತವೆ ಮತ್ತು ಅಪಘಾತ ಸ್ಥಳದಿಂದ ಕೋಲಾರದ ಕಡೆಗೆ ಹೋಗುವ ವಾಹನಗಳು ನಿಧಾನಗತಿಯಲ್ಲಿ ಬರುತ್ತವೆ ಎಂದರೆ ಸರಿಯಲ್ಲ. ಮೃತ ಸುರೇಶನ ವಾಹನ ಸಂಖ್ಯೆ ಕೆ.ಎ-28/ ಇ.ಕೆ-0507 ಇತ್ತು ಆದರೆ ಆತನ ವಾಹನ ಚಲಾವಣಾ ಪರವಾನಿಗೆ ನಂ ಗೊತ್ತಿಲ್ಲ. ಅಪಘಾತವನ್ನು ತಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ.ಅಪಘಾತ ಪಡಿಸಿದ ಬಸ್ಸು

ಸರ್ಕಾರಿ ಬಸ್ಸು ಜೀಪನ್ನು ಹಿಂದಿಕ್ಕಿ ಅಪಘಾತ ಪಡಿಸಿದೆ ಎಂದು ನುಡಿಯುವರು. ಅಪಘಾತವಾದ ರಸ್ತೆಯಲ್ಲಿ ನಿರಂತರವಾಗಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಪಘಾತ ಪಡಿಸಿದ ಬಸ್ಸು ಸರ್ಕಾರಿ ಬಸ್ಸು ಆಗಿರುವುದರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ದಾಖಲಿಸಿದ್ದು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ತಾನೇ ಬರೆದಿದ್ದೇನೆ ಎಂದರೆ ಸರಿ ಎಂದು ನುಡಿದಿರುತ್ತಾರೆ .

32. ಈ ಪ್ರಕರಣದಲ್ಲಿ ಸಾಂಧರ್ಬಿಕ ಸಾಕ್ಷಿದಾರರು ಮತ್ತು ಮೃತನ ಹೆಂಡತಿಯಾದ ಪ್ರಾ. ಸಾಃ 3 ರವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 4 ವರ್ಷಗಳ ಹಿಂದೆ ಒಂದು ದಿನ ಚಾಸಾ 1 ರವರು ದೂರವಾಣಿ ಕರೆ ಮಾಡಿ ಕೋಲ್ಹಾರ ಯು ಕೆ ಪಿ ರಸ್ತೆಯಲ್ಲಿರುವ ಗಿಡ್ಡಪ್ಪಗೋಳರವರ ಖಡಿ ಮಿಷನ ಹತ್ತಿರ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ತಾನು ಅಪಘಾತ ಸ್ಥಳಕ್ಕೆ ಹೋಗಿ ತನ್ನ ಗಂಡನನ್ನು ನೋಡಲಾಗಿ ತೀವ್ರ ಸ್ವರೂಪದ ಗಾಯಗಳಾಗಿದ್ದವು ಹಾಗೂ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಅಪಘಾತ ಸ್ಥಳದಲ್ಲಿ ಸರ್ಕಾರಿ ಬಸ್ಸು ಇತ್ತು. ಚಾಸಾ 1 ರವನ್ನು ವಿಚಾರಿಸಲಾಗಿದ್ದು ಸದರಿ ಸರ್ಕಾರಿ ಬಸ್ಸಿನ ತಪ್ಪಿನಿಂದಾಗಿ ಸಂಜೆ 7 ಗಂಟೆ ಸುಮಾರಿಗೆ ಅಪಘಾತವಾಗಿದೆ ಎಂದು ತಿಳಿದುಬಂತು. ಸದರಿ ಬಸ್ಸು ನಂಬರ ತನಗೆ ಗೊತ್ತಿಲ್ಲ. ಸದರಿ ಅಪಘಾತ ಪಡಿಸಿದ ಬಸ್ಸು ಚಾಲಕ ಸ್ಥಳದಲ್ಲಿದ್ದನು ಆದರೆ ತಾನು ಆತನನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ .

33. ಪ್ರಾ.ಸಾ-3 ರವರು ತಮ್ಮ ಪಾಟೀ ಸವಾಲಿನಲ್ಲಿ ಅಪಘಾತಕ್ಕೆ ಸಂಬಂಧಿಸಿದಂತೆ ಪರಿಹಾರಕ್ಕೆ ಬಿಜಾಪುರ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ, ಘಟನಾ ಸ್ಥಳಕ್ಕೆ ತಾನು ಹೋಗುವಾಗ ಸುಮಾರು 8 ಗಂಟೆ ಆಗಿತ್ತು. ಅಪಘಾತ ಪಡಿಸಿತ್ತು ಎಂದು ಹೇಳಲಾದ ಬಸ್ಸಿನ ಚಾಲಕ ಮತ್ತು ನಿರ್ವಾಹಕನ ಹೆಸರು ತನಗೆ ಗೊತ್ತಿಲ್ಲ. ತನ್ನ ಗಂಡನ ಮೋಟರ ಸೈಕಲ ನಂಬರ ತನಗೆ ಗೋತ್ತಿಲ ಯಾವ ಕಂಪನಿಯದ್ದು ಎಂದು ತನಗೆ ಗೊತ್ತಿಲ್ಲ. ತಾನು ಶಾಲೆ ಕಲಿತಿಲ್ಲ ಎಂದು ನುಡಿಯುವರು. ತನಗೆ ಅಪಘಾತದ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಕೂಡಾ ಪರಿಹಾರದ ಸಲುವಾಗಿ ಚಾಸಾ 1 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ಬಸ್ಸು ಚಾಲಕನ ಯಾವುದೇ ತಪ್ಪು ಇಲ್ಲದೇ ಇದ್ದರೂ ಕೂಡಾ ಅಪಘಾತವು ಬಸ್ಸು ಚಾಲಕನ ತಪ್ಪಿನಿಂದಾಗಿಯೇ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

34. ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.1 ಮತ್ತು 2 ರವರ ಸಾಕ್ಷ್ಯ ಮುಖ್ಯವಾಗಿರುತ್ತದೆ. ಪ್ರಾಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯನ್ನು ಗುರುತಿಸಿರುವುದಿಲ್ಲ . ಅದೇ ರೀತಿಯಾಗಿ ಪ್ರಾ.ಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ನಿಪಿ-1 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ತನಗೆ ಗೊತ್ತಿಲ್ಲ. ಆ ದಿನ ಬಸ್ಸು ಎಷ್ಟು ವೇಗದಲ್ಲಿ ಬರುತ್ತಿತ್ತು ಎಂಬುದು ತನಗೆ ಗೊತ್ತಿಲ್ಲ. ತಾನು ಬಸ್ಸನ್ನು 200 ಮೀಟರ ಅಂತರದಲ್ಲಿ ನೋಡಿರುತ್ತೇನೆ ಎಂದು ನುಡಿದಿರುವುದು ಕಂಡು ಬರುತ್ತದೆ. ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಸಾಕ್ಷ್ಯಕ್ಕೆ ವ್ಯತಿರೀಕ್ತವಾಗಿ ತಮ್ಮ ಪಾಟೀ ಸವಾಲಿನಲ್ಲಿ ಸಾಕ್ಷ್ಯವನ್ನು ನುಡಿದಿರುವುದು ಕಂಡು ಬರುತ್ತದೆ.

35. ಪ್ರಾಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ತನ್ನ ಬಸ್ಸನ್ನು ಅತಿ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ ಸುರೇಶ ತಂದೆ ಸಿದ್ದಪ್ಪ ಹಡಪದರವರು ಚಾಲನೆ ಮಾಡುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿರುತ್ತಾರೆ ಎಂದು ನುಡಿದಿರುವುದು ಕಂಡು ಬರುತ್ತದೆ. ಸದರಿ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಅಪಘಾತ ಸ್ಥಳದಿಂದ ಕೋಲಾರ ಕಡೆ ಹೋಗುವಾಗ ರಸ್ತೆಯು ಎರು ಇದೆ . ಕೋಲಾರದಿಂದ ಅಪಘಾತ ವಾದ ಸ್ಥಳದ ಕಡೆ ಬರುವ ವಾಹನಗಳು ವೇಗವಾಗಿ ಬರುತ್ತವೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡು ಬರುತ್ತದೆ. ಅಭಿಯೋಜನೆ ಪ್ರಕಾರ ಆರೋಪಿಯು ಬಾಗಲಕೋಟೆ ಕಡೆಯಿಂದ ವಿಜಯಪೂರಕ್ಕೆ ತನ್ನ ಬಸ್ಸನ್ನು ಚಾಲನೆ ಮಾಡಿಕೊಂಡು ತನ್ನ ಎದುರಿಗೆ ಬರುತ್ತಿದ್ದ ಮೋಟರ ಸೈಕಲ್ ಗೆ ಡಿಕ್ಕಿ ಪಡಿಸಿರುತ್ತಾರೆ ಎಂಬುದಾಗಿರುತ್ತದೆ. ಯುಕೆಪಿ ಕ್ರಾಸದಿಂದ ಕೋಲಾರ ಕಡೆಗೆ ರಸ್ತೆಯು ಎರು ಇದ್ದಾಗ ಆರೋಪಿಯು ತನ್ನ ಬಸ್ಸನ್ನು ಹೇಗೆ ವೇಗವಾಗಿ ಚಾಲನೆ ಮಾಡಲು ಸಾಧ್ಯವಿರುತ್ತದೆ. ಅದೇ ರೀತಿಯಾಗಿ ಪ್ರಾಸಾ-2 ರವರು ತಮ್ಮ ಪಾಟೀ

ಸವಾಲಿನಲ್ಲಿ ಅಪಘಾತವಾದ ರಸ್ತೆಯಲ್ಲಿ ನಿರಂತರವಾಗಿ ವಾಹನಗಳು ಓಡಾಡುತ್ತವೆ ಎಂದು ನುಡಿದಿರುವುದು ಕಂಡು ಬರುತ್ತದೆ. ಪ್ರಾಸಾ-1 ಮತ್ತು 2 ರವರು ತಮ್ಮ ಸಾಕ್ಷ್ಯಗಳಲ್ಲಿ ಆರೋಪಿ ಮತ್ತು ಮೃತ ಸುರೇಶ ತಂದೆ ಸಿದ್ದಪ್ಪ ಹಡಪದರವರು ತಮ್ಮ ವಾಹನಗಳನ್ನು ಯಾವ ಕಡೆಯಿಂದ ಯಾವ ಕಡೆಗೆ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂಬುದರ ಕುರಿತು ನಿರ್ಧಿಷ್ಟವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಅದೇ ರೀತಿಯಾಗಿ ಪ್ರಾ.ಸಾ-1 ರಿಂದ 3 ರವರುಗಳು ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿರುವುದು ಕಂಡು ಬರುತ್ತದೆ. ಹಾಗಾಗಿ ಪ್ರಾ.ಸಾ-1 ರಿಂದ 3 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ್ಯ ಸಾಕ್ಷಿದಾರರ ಸಮರ್ಥನೆ ಇಲ್ಲದೇ ಪ್ರಾ.ಸಾ-1 ರಿಂದ 3 ರವರ ಸಾಕ್ಷ್ಯಯ ಕುರಿತು ಸಂಶಯವನ್ನುಂಟು ಮಾಡುತ್ತದೆ.

36. ಮಾನ್ಯ ಆರೋಪಿ ಪರ ವಕೀಲರು ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ, ಸದರಿ ಅಪಘಾತಕ್ಕೆ ಮೃತರ ನಿರ್ಲಕ್ಷ್ಯತನವೇ ಕಾರಣ ಮತ್ತು ಯಾವುದೇ ಒಂದು ಅಪಘಾತವು ಎರಡು ವಾಹನಗಳ ನಡುವೆ ಎದುರು ಬದುರು ಡಿಕ್ಕಿ ಹೊಡೆದಾಗ ಕೇವಲ ಒಂದೇ ವಾಹನದ ಚಾಲಕನ ತಪ್ಪು ಎಂದು ಪರಿಗಣಿಸಲು ಬರುವುದಿಲ್ಲ ಎಂದು ವಾದವನ್ನು ಮಂಡಿಸಿರುತ್ತಾರೆ. ದುಡುಕು ಅಥವಾ ನಿರ್ಲಕ್ಷ್ಯ ಎಂದರೆ ಯಾವನೇ ವ್ಯಕ್ತಿಯು ತನ್ನ ಕೃತ್ಯದ ಪರಿಣಾಮವನ್ನು ಊಹಿಸಬಲ್ಲನು ಮತ್ತು ಅಂತಹ ಪರಿಣಾಮ ಉಂಟಾಗುವ ಸಾಧ್ಯತೆ ಇದೆ ಎಂಬುದನ್ನು ಅರಿತಿರುತ್ತಾನೆ. ಹೀಗೆ ಪರಿಣಾಮದ ಸಾಧ್ಯತೆಯನ್ನು ಊಹಿಸಿ ಅದು ಉಂಟಾಗದಂತೆ ವ್ಯವಹರಿಸುವುದು ಅವನ ಕರ್ತವ್ಯ. ಅದರೆ ಊಹಿಸದ ಪರಿಣಾಮ ಉಂಟಾದರೆ ಅದು ದುಡುಕುತನ ಅಥವಾ ನಿರ್ಲಕ್ಷ್ಯದ ಕೃತ್ಯವಾಗುತ್ತದೆ.

37. ಪ್ರಾ.ಸಾ.1 ರಿಂದ 3 ರವರು ತಮ್ಮ ಸಾಕ್ಷ್ಯಗಳಲ್ಲಿ ಆರೋಪಿಯು ತನ್ನ ಬಸ್ಸನ್ನು ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಪ್ರಾಸಾ-2 ರವರ ಬೈಕಿಗೆ ಡಿಕ್ಕಿ ಪಡಿಸಿರುತ್ತಾನೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ವೇಗವಾದ ಚಾಲನೆ ಮತ್ತು ನಿರ್ಲಕ್ಷ್ಯತೆಯು ಬೇರೆ ಬೇರೆ ಯಾಗಿರುತ್ತವೆ, ವೇಗವಾದ ಚಾಲನೆಯನ್ನು ನಿರ್ಲಕ್ಷ್ಯತೆ ಎಂದು ಪರಿಗಣಿಸಲು ಬರುವುದಿಲ್ಲ. ಆ

ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 10.01.2018 ರ ಕ್ರಿಮಿನಲ್ ಅಪೀಲ್ ಸಂಖ್ಯೆ 634/2014 ರಲ್ಲಿ *The State of Karnataka by Maluru Police -Vs- Chalapathi* ನೀಡಿರುವ ತೀರ್ಪುಜನ್ಯದಲ್ಲಿ ಈ ಕೆಳಗಿನಂತೆ ಉಲ್ಲೇಖಿಸಿರುತ್ತದೆ.

> *Apart from this, even if it is accepted by this Court for the sake of appreciation of the case of prosecution that if it is believed that P.W.2 is the eye witness to the incident, but looking to his deposition before the Court below, he has spoken only about the speed of the vehicle at which it was moving and he has stated that the driver of the tractor was driving it on high speed, the driver came in high speed and dashed to the driver of the two wheeler vehicle. P.W.2 has not spoken specifically in his evidence that the driver of the tractor was driving it in rash and negligent manner and because of that reason, the accident has happened. Therefore, in the absence of such evidence before the Court so far as the rash and negligent driving which is the essential requirements of Sections 279 and 304A of IPC, only on the basis of the evidence of P.W.2 that the driver was driving the tractor vehicle in a high speed and caused accident, is not sufficient to come to the conclusion that the prosecution is said to have*

> *proved the offences under Sections 279 and 304A of IPC. Therefore, this aspect was properly appreciated by the Court below;*

ಈ ಮೇಲಿನ ತೀರ್ಪುಜನ್ಯವು ಈ ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುತ್ತದೆ.

38. ಈ ಮೇಲ್ಕಂಡ ಸಾಕ್ಷಿದಾರರಾದ ಪ್ರಾಸಾ:1 ರಿಂದ 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಸದರಿ ಪ್ರಾಸಾ-1 ರಿಂದ 3 ರವರು ಸ್ನೇಹಿತರು ಮತ್ತು ಸಂಬಂಧಿಕರು ಆಗಿರುವುದು ಕಂಡು ಬರುತ್ತದೆ. ಹಾಗಾಗಿ ಪ್ರಾಸಾ:1 ರಿಂದ 3 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ್ಯ ಸಾಕ್ಷಿದಾರರ ಸಮರ್ಥನೆಯಿಲ್ಲದೆ ಪ್ರಾಸಾ:1 ರಿಂದ 3 ರವರ ಸಾಕ್ಷ್ಯಗಳ ಕುರಿತು ಸಂಶಯವನ್ನುಂಟು ಮಾಡುತ್ತದೆ.

39. ಅಭಿಯೋಜನೆಯ ಪರವಾಗಿ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ಬಾಗಲಕೋಟ ವಿಜಯಪೂರ ಎನ್ ಎಚ್ 218 ರಸ್ತೆಯ ಮೇಲೆ ಅಪಘಾತ ಸಂಭವಿಸಿರುವುದು ಕಂಡುಬರುತ್ತದೆ. ಈ ಪ್ರಕರಣದಲ್ಲಿ ಅಪಘಾತ ಸಂಭವಿಸಿದ ಸ್ಥಳದ ಕಚ್ಚಾ ನಕ್ಷೆ ಮತ್ತು ಅಪಘಾತ ಸಂಭವಿಸಿದ ಸ್ಥಳದ ಬಗ್ಗೆ ಸ್ಪಷ್ಟ ಛಾಯಾಚಿತ್ರಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುವುದಿಲ್ಲ.

40. ಈ ಮೇಲ್ಕಂಡಂತೆ ಅಭಿಯೋಜನೆಯ ಪರ ಪ್ರತ್ಯಕ್ಷ ಸಾಕ್ಷಿದಾರರ ವ್ಯತಿರಿಕ್ತ ಸಾಕ್ಷ್ಯ ಹಾಗೂ ಅಪಘಾತ ನಡೆದ ಸ್ಥಳದ ಕುರಿತ ಸ್ಪಷ್ಟ ಚಿತ್ರಣ ಇಲ್ಲದಿರುವುದು ಆರೋಪಿತನು ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತಪಡಿಸಿದ್ದಾನೆಂದು ಸಂಶಯಾತೀತವಾಗಿ ರುಜುವಾತು ಪಡಿಸುವಂತಹ ಅಂಶಗಳನ್ನು ನಿರೂಪಿಸಲು ಸಾಧ್ಯವಾಗದಿರುವುದು ಕಂಡುಬಂದಿರುತ್ತದೆ.

41. ಮೃತ ವ್ಯಕ್ತಿಯು ತೀವ್ರ ಸ್ವರೂಪದ ಗಾಯದಿಂದ ಅಪಘಾತದಿಂದ ಮೃತಪಟ್ಟಿರುವುದು ಕಂಡುಬರುತ್ತದೆ. ಆದರೆ ಆತನ ಸಂಬಂಧಿಕರು ನೀಡಿರುವ ಪ್ರತ್ಯಕ್ಷ ಸಾಕ್ಷ್ಯವನ್ನು ಪರಿಶೀಲಿಸಿದಾಗ ಆರೋಪಿತನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಅಪಘಾತಕ್ಕೆ ಕಾರಣವಾದ ಬಸ್ಸನ್ನು ಚಾಲನೆ ಮಾಡಿ ಮೃತ ವ್ಯಕ್ತಿಯ ಸಾವಿಗೆ ಕಾರಣನಾಗಿದ್ದಾನೆಂದು ನಿರ್ಣಯಕ್ಕೆ ಬರಲು ಪೂರಕ ಸಾಕ್ಷ್ಯಾಧಾರಗಳು ಇರುವುದಿಲ್ಲ. ಆರೋಪಿತನು ನಿರ್ಲಕ್ಷತೆಯನ್ನು ವಹಿಸಿದ್ದನು ಹಾಗೂ ಸದರಿ ಸದರಿ ನಿರ್ಲಕ್ಷತೆ ಮತ್ತು ಅತೀವೇಗದಿಂದ ಅಪಘಾತ ಸಂಭವಿಸಿದೆ ಎಂದು ಸಂಶಯಾತೀತವಾಗಿ ರುಜುವಾತುಪಡಿಸುವಂತಹ ಸಾಕ್ಷಾಧಾರಗಳ ಲಭ್ಯತೆ ಕಂಡು ಬಂದಿರುವುದಿಲ್ಲ. ಹಾಗಾಗಿ ಸದರಿ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಅಭಿಯೋಜನೆಯು ಆರೋಪಿಯ ವಿರುದ್ಧದ ಆರೋಪವನ್ನು ರುಜುವಾತುಪಡಿಸಲು ವಿಫಲವಾಗಿರುತ್ತದೆ ಎಂದು ನಿರ್ಣಯಕ್ಕೆ ಬಂದು ಆರೋಪಿಯು ಬಿಡುಗಡೆ ಹೊಂದಲು ಅರ್ಹರಿರುತ್ತಾರೆ ಅಂತ ಅಭಿಪ್ರಾಯಪಟ್ಟು ಅಂಶ ಸಂಖ್ಯೆ 1 ಮತ್ತು 2 ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿರುತ್ತದೆ.

42. <u>ಅಂಶ ಸಂಖ್ಯೆ **3** ಃ-</u> ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.255 (1) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, ಆರೋಪಿಯನ್ನು ಆತನ ವಿರುದ್ದ ಹೊರಿಸಿದ ಭಾರತೀಯ ದಂಡ ಸಂಹಿತೆ ಕಲಂ.279 ಮತ್ತು 304(ಎ) ರ ಆರೋಪಗಳಿಗಾಗಿ ನಿರಪರಾಧಿ ಎಂದು ನಿರ್ಣಯಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿಯ ಮತ್ತು ಆತನ ಜಾಮೀನುದಾರರು ದಂ.ಪ್ರ.ಸಂ. ಕಲಂ 437(ಎ)ರ ಅಡಿಯಲ್ಲಿ

ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 15 ನೇ ಜುಲೈ 2026 ರಂದು ನಾನು ಉದ್ಘೋಷಿಸಿದ್ದೇನೆ.)

(ಈರಪ್ಪ ಢವಳೇಶ್ವರ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಬಸವನ ಬಾಗೇವಾಡಿ

**ಅ ನು ಬಂ ಧ**

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

ಪ್ರಾ.ಸಾ.1 : ಪರಶುರಾಮ ತಂದೆ ಮಗುಂಡಪ್ಪ
ಪ್ರಾ.ಸಾ.2 : ಪರಶುರಾಮ ತಾಯಿ ಚಂದ್ರವ್ವ ಚಲವಾದಿ
ಪ್ರಾ.ಸಾ.3 : ಲಕ್ಷ್ಮೀಬಾಯಿ ಗಂಡ ಸುರೇಶ ಹಡಪದ
ಪ್ರಾ.ಸಾ.4 : ಮಹದೇವ ತಂದೆ ನೇಮಣ್ಣ ಶಿರಹಟ್ಟಿ
ಪ್ರಾ.ಸಾ.5 : ಚಂದ್ರಕಾಂತ ತಂದೆ ಗಂಗಾದರಪ್ಪ ಗಂಗರೆಡ್ಡಿ
ಪ್ರಾ.ಸಾ.6 : ರವೀಂದ್ರ ನಾಮಣ್ಣ ನಾಯ್ಕೋಡಿ

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

ನಿಪಿ.1 : ದೂರು

ನಿಪಿ.2 : ಶವ ಪಂಚನಾಮೆ

ನಿಪಿ-3 : ಶವ ಪರೀಕ್ಷಾ ವರದಿ

ನಿಪಿ-4 : ಮೋಟರ ವಾಹನ ಪರೀಕ್ಷಾ ವರದಿಃ

ನಿಪಿ-5 :ಸ್ಥಳ ಮಹಜರ

ನಿಪಿ-6 : ಕಚ್ಚಾ ನಕಾಶೆ

ನಿಪಿ-7 : ಚಾಲಕನ ಹಾಜರಾತಿಯ ದೃಡಿಕರಣ ಪತ್ರ

ನಿಪಿ-8 -9: ಮುಚ್ಚಳಿಕೆ ಬಾಂಡ ಪತ್ರಗಳು

ನಿಪಿ-10: ಪ್ರಥಮ ವರ್ತಮಾನ ವರದಿ

**ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ- - ಇಲ್ಲಾ -**

**ಆರೋಪಿ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ- - ಇಲ್ಲಾ -**

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳುಃ- - ಇಲ್ಲಾ -**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಬಸವನ ಬಾಗೇವಾಡಿ